ಜಿ.ಟಿ.ಸಂಖ್ಯೆ **2998 /2024**

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ಕಾರ್ಯಾಲಯ,
(ಆಡಳಿತ ವಿಭಾಗ) ತುಮಕೂರು. ದಿನಾಂಕ: 15/7/2024

## ಶೀಘ್ರಲಿಪಿಗಾರ ಗ್ರೇಡ್-III ಹುದ್ದೆ

## "ಕೌಶಲ ಪರೀಕ್ಷೆ"

**ವಿಷಯ:** ಶೀಘ್ರಲಿಪಿಗಾರರ ಗ್ರೇಡ್-III ಹುದ್ದೆಗೆ ಕೌಶಲ ಪರೀಕ್ಷೆ ನಡೆಸುವ ಕುರಿತು.

**ಉಲ್ಲೇಖ:** ಈ ಕಚೇರಿ ಅಧಿಸೂಚನೆ ಸಂಖ್ಯೆ ಆಡಳಿತ-1-46/2024, ದಿನಾಂಕ 5/3/2024.

ತುಮಕೂರು ಜಿಲ್ಲಾ ನ್ಯಾಯಾಂಗ ಘಟಕದಲ್ಲಿನ ಶೀಘ್ರಲಿಪಿಗಾರ ಗ್ರೇಡ್-III ಹುದ್ದೆಗೆ ಅರ್ಜಿ ಸಲ್ಲಿಸಿರುವ ಅರ್ಹ ಅಭ್ಯರ್ಥಿಗಳಿಗೆ **ದಿನಾಂಕ 29/7/2024, 30/7/2024, 31/7/2024, 1/8/2024, 2/8/2024, 5/8/2024, 6/8/2024, 7/8/2024, 8/8/2024 ಮತ್ತು 9/8/2024 ರಂದು** ತುಮಕೂರಿನ ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯದಲ್ಲಿ ಕೌಶಲ ಪರೀಕ್ಷೆಯನ್ನು **ಪೂರ್ವಾಹ್ನ 9.00 ಗಂಟೆಯಿಂದ** ನಡೆಸಲಾಗುವುದು.

ಮೇಲ್ಕಂಡ ದಿನಗಳಂದು ಕೌಶಲ ಪರೀಕ್ಷೆಗೆ ಹಾಜರಾಗಬೇಕಾಗಿರುವ ಅಭ್ಯರ್ಥಿಗಳ ಪಟ್ಟಿಯನ್ನು ಈ ಪತ್ರದೊಂದಿಗೆ ಪ್ರಕಟಿಸಲಾಗಿದೆ.

ಅಭ್ಯರ್ಥಿಗಳು ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸುವ ಸಂದರ್ಭದಲ್ಲಿ ನಮೂದಿಸಿರುವ ವಿವರಗಳಿಗೆ ಸಂಬಂಧಿಸಿದಂತೆ ಎಲ್ಲಾ ಮೂಲದಾಖಲೆಗಳ ಪ್ರತಿಯೊಂದನ್ನು (Xerox) **ಸ್ವಯಂ ದೃಢೀಕರಿಸಿ** ಕೌಶಲ ಪರೀಕ್ಷೆಗೆ ಹಾಜರಾಗುವ ದಿನದಂದು ಈ ಕಚೇರಿಗೆ ಸಲ್ಲಿಸತಕ್ಕದ್ದು.

ಕೌಶಲ ಪರೀಕ್ಷೆಯನ್ನು ಗಣಕಯಂತ್ರದ (Computer) ಮೂಲಕ ಮಾನ್ಯ ಉಚ್ಚನ್ಯಾಯಾಲಯವು ಸಿದ್ಧಪಡಿಸಿರುವ ವಿಶೇಷ ತಂತ್ರಾಂಶದಲ್ಲಿ ನಡೆಸಲಾಗುವುದು. ಬೆರಳಚ್ಚು ಯಂತ್ರದ ಕೀಲಿಮಣೆಯನ್ನು ಹೋಲುವ ತಂತ್ರಾಂಶವನ್ನು ಗಣಕಯಂತ್ರಗಳಿಗೆ ಅಳವಡಿಸಲಾಗುವುದು.

**ನಿಗದಿತ ದಿನದಂದು ಅಭ್ಯರ್ಥಿಗಳು ಈ ಕೆಳಕಂಡ ದಾಖಲೆಗಳೊಂದಿಗೆ ಹಾಜರಾಗುವುದು:**

1. ಆನ್‌ಲೈನ್ ಮೂಲಕ ಸಲ್ಲಿಸಿದ ಅರ್ಜಿಯ ಪ್ರತಿ
2. ಪಾಸ್‌ಪೋರ್ಟ್ ಅಳತೆಯ ಒಂದು ಭಾವಚಿತ್ರ
3. ಎಸ್.ಎಸ್.ಎಲ್.ಸಿ ಮೂಲ ಅಂಕಪಟ್ಟಿ
4. ಪಿ.ಯು.ಸಿ ಮೂಲ ಅಂಕಪಟ್ಟಿ
5. ಕನ್ನಡ ಮತ್ತು ಇಂಗ್ಲೀಷ್ ಪ್ರೌಢದರ್ಜೆ ಬೆರಳಚ್ಚು ಪರೀಕ್ಷೆಗಳ ಮೂಲ ಅಂಕಪಟ್ಟಿಗಳು
6. ಕನ್ನಡ ಮತ್ತು ಇಂಗ್ಲೀಷ್ ಪ್ರೌಢದರ್ಜೆ ಶೀಘ್ರಲಿಪಿಗಾರ ಪರೀಕ್ಷೆಗಳ ಮೂಲ ಅಂಕಪಟ್ಟಿಗಳು
7. ಜಾತಿ ಪ್ರಮಾಣ ಪತ್ರದ ಮೂಲಪ್ರತಿ (ಮೀಸಲಾತಿ ಕೋರಿದ್ದಲ್ಲಿ ಮಾತ್ರ)
8. ಗ್ರಾಮೀಣ ಅಭ್ಯರ್ಥಿ ಪ್ರಮಾಣ ಪತ್ರದ ಮೂಲಪ್ರತಿ (ಮೀಸಲಾತಿ ಕೋರಿದ್ದಲ್ಲಿ ಮಾತ್ರ)
9. ಅಂಗವಿಕಲ ಪ್ರಮಾಣಪತ್ರದ ಮೂಲಪ್ರತಿ (ಮೀಸಲಾತಿ ಕೋರಿದ್ದಲ್ಲಿ ಮಾತ್ರ)
10. ಶಾಲಾ ನಡತೆ ಪ್ರಮಾಣ ಪತ್ರ
11. ಇಬ್ಬರು ಸ್ಥಳೀಯ ಗಣ್ಯ ವ್ಯಕ್ತಿಗಳಿಂದ ಪಡೆದ ನಡತೆ ಪ್ರಮಾಣ ಪತ್ರ

**ಸೂಚನೆ:**

- ಅಭ್ಯರ್ಥಿಗಳು ಅವರ ಸ್ವಂತ ಖರ್ಚಿನಲ್ಲಿ ಕೌಶಲ ಪರೀಕ್ಷೆಗೆ ಹಾಜರಾಗತಕ್ಕದ್ದು.
- ಪರೀಕ್ಷೆಗೆ ನಿಗದಿಪಡಿಸಿದ ದಿನದಂದು ಮಾತ್ರ ಅಭ್ಯರ್ಥಿಗಳು ಹಾಜರಾಗುವುದು.
- ಅಭ್ಯರ್ಥಿಗಳು ನಿಗದಿತ ದಿನದಂದು ಗೈರುಹಾಜರಾದಲ್ಲಿ ಅಂತಹ ಅಭ್ಯರ್ಥಿಗಳಿಗೆ ಮರು ಅವಕಾಶವಿರುವುದಿಲ್ಲ.
- ದಾಖಲೆಗಳ ಪರಿಶೀಲನೆಯ ಸಂದರ್ಭದಲ್ಲಿ ನಿಗದಿತ ವಿದ್ಯಾರ್ಹತೆ ಹೊಂದಿಲ್ಲದಿರುವುದು ಕಂಡುಬಂದಲ್ಲಿ ಅಂತಹ ಅಭ್ಯರ್ಥಿಗಳನ್ನು ಕೌಶಲ ಪರೀಕ್ಷೆಗೆ ಪರಿಗಣಿಸಲಾಗುವುದಿಲ್ಲ.
- ಅಭ್ಯರ್ಥಿಗಳು ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸುವಾಗ ನೀಡಿರುವ ಮಾಹಿತಿಗಳಿಗೂ ಹಾಗೂ ಕೌಶಲ ಪರೀಕ್ಷೆಗೆ ಹಾಜರಾದ ಸಂದರ್ಭದಲ್ಲಿ ನೀಡುವ ದಾಖಲೆಗಳಿಗೂ ತಾಳೆ ಆಗದ ಸಂದರ್ಭದಲ್ಲಿ ಅಂತಹ ಅಭ್ಯರ್ಥಿಗಳ ಅಭ್ಯರ್ಥಿತ್ವವನ್ನು ರದ್ದುಗೊಳಿಸಲಾಗುವುದು.
- ಅಭ್ಯರ್ಥಿಗಳು ತಮ್ಮ ಭಾವಚಿತ್ರವಿರುವ ಅಧಿಕೃತ ಗುರುತಿನ ಚೀಟಿಯನ್ನು ತರುವುದು.
- ಅಭ್ಯರ್ಥಿಗಳು ಸುಳ್ಳು ಮಾಹಿತಿಯನ್ನು ನೀಡಿರುವುದು ಪರಿಶೀಲನೆಯ ಸಂದರ್ಭದಲ್ಲಿ ಕಂಡುಬಂದಲ್ಲಿ ನೇಮಕಾತಿಯ ನಿಯಮಗಳ ಅನ್ವಯ ಸೂಕ್ತ ಕ್ರಮವನ್ನು ಕೈಗೊಳ್ಳಲಾಗುವುದು.
- ಈ ನೇಮಕಾತಿ ಪ್ರಕ್ರಿಯೆಯು ಸಂಪೂರ್ಣ ಪಾರದರ್ಶಕವಾಗಿದ್ದು, ಯಾವುದೇ ಬಗೆಯ ಬಾಹ್ಯ ಆಮಿಷಗಳು ಮತ್ತು ಒತ್ತಡಗಳಿಗೆ ಅಭ್ಯರ್ಥಿಗಳು ಒಳಗಾಗಬಾರದೆಂದು ತಿಳಿಸಿದೆ.
- ಅಭ್ಯರ್ಥಿಗಳು ಆಯ್ಕೆ ಪ್ರಕ್ರಿಯೆಯಲ್ಲಿ ಯಾವುದೇ ಪ್ರಭಾವವನ್ನು ಬೀರಲು ಪ್ರಯತ್ನಿಸಿದಲ್ಲಿ ಅದನ್ನು ಅತ್ಯಂತ ಗಂಭೀರವಾಗಿ ಪರಿಗಣಿಸಿ ಸೂಕ್ತ ಕ್ರಮ ಕೈಗೊಳ್ಳಲಾಗುವುದು ಮತ್ತು ಅಭ್ಯರ್ಥಿಗಳ ಅಭ್ಯರ್ಥಿತ್ವವನ್ನು ಯಾವುದೇ ಮುನ್ಸೂಚನೆಯಿಲ್ಲದೆ ರದ್ದುಪಡಿಸಲಾಗುವುದು.

**–ಸಹಿ/–**
(ಬಿ. ಜಯಂತ ಕುಮಾರ್)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ತುಮಕೂರು